**ಅ.ದಾವಾ. 199/2020** **ಡಿ.ಡಬ್ಲ್ಯೂ- 1**

**ದಿನಾಂಕ: 22/11/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲು:- ಶ್ರೀ ಕೆ. ಎನ್. ವಿ ವಕೀಲರಿಂದ ವಾದಿಯ ಪರವಾಗಿ.**

ನಾನು 8ನೇ ತರಗತಿಯವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನ್ನ ತಂದೆಗೆ ನಾವು 4 ಜನ ಮಕ್ಕಳು. ನಾವು 4 ಜನ ಪ್ರತ್ಯೇಕವಾಗಿ ವಾಸವಾಗಿದ್ದೇವೆ. ನಾವು ಸುಮಾರು 20 ರಿಂದ 25 ವರ್ಷಗಳಿಂದ ಪ್ರತ್ಯೇಕವಾಗಿ ವಾಸವಾಗಿದ್ದೇವೆ. ನಾನು ಹುಟ್ಟಿದಾಗಿನಿಂದಲೂ ಕಟ್ಟೆಬೆಳಗುಲಿ ಗ್ರಾಮದಲ್ಲಿ ವಾಸವಾಗಿದ್ದೇನೆ. ನಮ್ಮ ಗ್ರಾಮದ ಸುತ್ತಮುತ್ತಲ ಹಳ್ಳಿಯವರು ಹೆಸರುಗಳು ನನಗೆ ಚೆನ್ನಾಗಿ ಗೊತ್ತು ಎಂದರೆ ಸರಿ . ಕಟ್ಟೆಬೆಳಗುಲಿ ಗ್ರಾಮದಿಂದ ಎಳ್ಳೇಶಪುರ ಗ್ರಾಮಕ್ಕೆ ಸುಮಾರು 1 ರಿಂದ 1.5 ಕಿ. ಮೀ. ದೂರ ಇರುತ್ತದೆ.

1ನೇ ಪ್ರತಿವಾದಿಯ ಮನೆಯವರು ನನಗೆ ಚೆನ್ನಾಗಿ ಗೊತ್ತು ಎಂದರೆ ಸರಿ . ಅವರ ಮನೆಯವರ ಹೆಸರುಗಳೆಲ್ಲವೂ ನನಗೆ ಗೊತ್ತು ಎಂದರೆ ಸರಿ . 1ನೇ ಪ್ರತಿವಾದಿಯ ಮನೆಯವರ ಹೆಸರುಗಳೆಲ್ಲವೂ ನನಗೆ ಸುಮಾರು 15 ವರ್ಷಗಳಿಂದ ಗೊತ್ತು. 1ನೇ ಪ್ರತಿವಾದಿಯ ಪತ್ನಿಯ ಹೆಸರು ಭಾಗ್ಯಮ್ಮ. 1ನೇ ಪ್ರತಿವಾದಿಯ ಮಗನ ಹೆಸರು ಯತೀಶ ಅಲಿಯಾಸ್ ಜಗದೀಶ, ಮಗಳ ಹೆಸರು ಅರ್ಚನ. ನಾನು ದಾವಾನುಸೂಚಿ ಸ್ವತ್ತುಗಳನ್ನು ಖರೀದಿಸುವ ಸಮಯದಲ್ಲಿ ವಾದಿಯರ ಹಾಗೂ 1ನೇ ಪ್ರತಿವಾದಿಯ ಅನುಮತಿಯನ್ನು ಪಡೆದುಕೊಂಡಿರುತ್ತೇನೆ. 1ನೇ ಪ್ರತಿವಾದಿ ಇಂದ ಜಮೀನನ್ನು ಬರೆಸಿಕೊಳ್ಳುವ ಸಮಯದಲ್ಲಿ ನಾನು ದಾಖಲೆಗಳನ್ನು ಪರಿಶೀಲನೆ ಮಾಡಿರುತ್ತೇನೆ.

ರಮೇಶ್ ರವರು ಒಬ್ಬರೇ ಮಗ ಅವರ ಒಡಹುಟ್ಟಿದ ತಂಗಿ ಶಿವಕುಮಾರಿ . ದಾವಾನುಸೂಚಿ ಸ್ವತ್ತುಗಳು 1ನೇ ಪ್ರತಿವಾದಿಯ ಪಿತ್ರಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸಾಕ್ಷಿಯು ಅದು ಸ್ವಯಾರ್ಜಿತ ಆಸ್ತಿ ಎಂದು ನುಡಿಯುತ್ತಾರೆ. ನೀವು ಯತೀಶ್ ಅಲಿಯಾಸ್ ಜಗದೀಶ್ ರವರ ಆಧಾರ್ ಕಾರ್ಡ್ ಅನ್ನು ಆ ಸಮಯದಲ್ಲಿ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ಆಗ ಅವರ ಆಧಾರ್ ಕಾರ್ಡ್ ಆಗಿರಲಿಲ್ಲ ಎಂದು ನುಡಿಯುತ್ತಾರೆ. ದಾವಾನುಸೂಚಿ ಸ್ವತ್ತುಗಳ ಕ್ರಯ ಪತ್ರ ನೋಂದಣಿಯಾಗುವ ಸಮಯದಲ್ಲಿ 1ನೇ ವಾದಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ. 1ನೇ ವಾದಿಯ ದಾಖಲೆಗಳನ್ನು ಆ ಸಮಯದಲ್ಲಿ ಪಡೆದುಕೊಳ್ಳುಲು ನಮಗೆ ಯಾವುದೇ ತೊಂದರೆ ಇರಲಿಲ್ಲ. ನಾನು 1ನೇ ಪ್ರತಿವಾದಿಯಿಂದ

ದಾವಾನುಸೂಚಿ ಸ್ವತ್ತುಗಳನ್ನು ಖರೀದಿಸುವ ಸಮಯದಲ್ಲಿ ವಾದಿಯರು ಅಪ್ರಾಪ್ತ ವಯಸ್ಕರು ಆಗಿದ್ದರು ಎನ್ನುವುದಕ್ಕೆ ಅವರ ಶಾಲಾ ದಾಖಲೆಗಳನ್ನು ಪಡೆದುಕೊಳ್ಳಲು ತೊಂದರೆ ಇರಲಿಲ್ಲ. 1ನೇ ಪ್ರತಿವಾದಿಯ ಮಕ್ಕಳ ಹೆಸರುಗಳನ್ನು ದೃಡೀಕರಿಸಲು ಅವರ ಶಾಲಾ ದಾಖಲೆಗಳು ಆಗಲೀ ಬೇರೆ ಯಾವುದೇ ಗುರುತಿನ ಚೀಟಿಗಳನ್ನು ಪಡೆದುಕೊಳ್ಳಲು ತೊಂದರೆ ಇತ್ತ ಎಂದರೆ ಸಾಕ್ಷಿಯು ಉಪನೋಂದಣಾಧಿಕಾರಿ ಕಛೇರಿಗೆ ತಂದು ಕೊಡುವುದಾಗಿ ಹೇಳಿದ್ದರು ಆದರೆ ತಂದು ಕೊಟ್ಟಿಲ್ಲ ಎಂದು ನುಡಿಯುತ್ತಾರೆ. ಕ್ರಯ ಪತ್ರ ನೋಂದಣಿ ಆದ ನಂತರವು 1 ನೇ ಪ್ರತಿವಾದಿಯ ಮಕ್ಕಳಿಗೆ ಸಂಬಂಧಪಟ್ಟ ದಾಖಲೆಗಳನ್ನು ಕೊಡುವಂತೆ ನಾನು ಕೇಳಿರುತ್ತೇನೆ, 1ನೇ ಪ್ರತಿವಾದಿ ಕೊಡುತ್ತೇನೆ ಎಂದು ಹೇಳುತ್ತಿದ್ದರು ಆದರೆ ಕೊಟ್ಟಿಲ್ಲ ಎಂದು ನುಡಿಯುತ್ತಾರೆ.

1ನೇ ವಾದಿಯ ಹೆಸರು ಹಾಗೂ ವಯಸ್ಸನ್ನು ದೃಡೀಕರಿಸುವ ದಾಖಲೆಗಳನ್ನು ಉಪನೋಂದಣಾಧಿಕಾರಿ ಕಛೇರಿಗೆ ನೀಡಿ ಕ್ರಯ ಪತ್ರವನ್ನು ನೋಂದಣಿ ಮಾಡಿಸಿಕೊಳ್ಳಲಾಗಿದೆ. ಆ ರೀತಿ ಯಾವ ದಾಖಲೆಗಳನ್ನು ಉಪನೋಂದಣಾಧಿಕಾರಿ ಕಛೇರಿಗೆ ಕೊಟ್ಟಿರುತ್ತೀರಿ ಎಂದರೆ ಸಾಕ್ಷಿಯು 1ನೇ ವಾದಿಗೆ ಸಂಬಂಧಪಟ್ಟ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ ಎಂದು ನುಡಿಯತ್ತಾರೆ.

**<u>( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು).</u>**

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.